ಪರಿಹಾರ ಬರುತ್ತದೆ ಎಂಬ ವಿಶ್ವಾಸದಲ್ಲಿ ನಾವು ಇದ್ದೇವೆ, ಇದರಲ್ಲಿ ರಾಜಕೀಯ ಪ್ರಶ್ನೆ ಇಲ್ಲ. ಆದರೆ ಈಗ ಪ್ರಶ್ನೆ ಇರುವುದು ಎಂದರೆ ನೀವು ತೊಗರಿಗೆ ಕೊಡುತ್ತೀರಿ. ಪಕ್ಕದಲ್ಲಿರುವ ರೈತ ನೋಡಿಕೊಂಡು ಇರಬೇಕಾ ? ಹಾಗಾದರೆ ಅವನ ಕಥೆ ಏನು ? ಜೋಳ ಕಳೆದುಕೊಂಡವನು, ಉದ್ದು ಕಳೆದುಕೊಂಡವನು.

ಶ್ರೀ ಜೆ.ಹೆಚ್. ಪಟೇಲ್ (ಮುಖ್ಯಮಂತ್ರಿಗಳು) : ನಮ್ಮಲ್ಲಿ ಭತ್ತಕ್ಕೆ ಬೆಂಕಿ ರೋಗ ಬಂದು, ಹತ್ತತ್ತು ಎಕರೆಗೂ ಒಂದು ಕಾಳು ಸಹ ಬಂದಿಲ್ಲ. ದಾವಣಗೆರೆ ಹತ್ತಿರ ಕಾಕೆ ಜೋಳ ಹಾಕಿದವರದ್ದು ಸುಟ್ಟು ಹೋಗಿದೆ. ನೆಲಗಡಲೆ ಕೆಲವು ಏರಿಯಾದಲ್ಲಿ ಬಂದಿಲ್ಲ. ಧಾರವಾಡ ಜಿಲ್ಲೆಯಲ್ಲಿ ಕಾಕೆ ಜೋಳ ಸುಟ್ಟು ಹೋಗಿದೆ. ಅದಕ್ಕೆ ನಾವು ಈ ಸಾರಿ ಸದನದಲ್ಲಿ ತೊಗರಿ ಬೇಳೆಯಿಂದ ಎಂದು ಹೇಳಿದ್ದೇವೆ. ರೈತರಿಗೆ ಯಾವುದೇ ಕಾರಣದಿಂದ ಅವರಿಗೆ ಫಸಲು ಲಾಸ್ ಆದರೆ ಈ ಲಾಸನ್ನು ಭರ್ತಿ ಮಾಡಿಕೊಡಬೇಕೆಂದು even Government of America is not capable of doing. Do you know what they do,.... ಇನ್‌ಷ್ಯೂರ್ ಮಾಡಿಸಿದ್ದರೆ ಫುಲ್ ಕಾಂಪನ್ಸೇಷನ್ ಕೊಡುತ್ತಾರೆ. ಕ್ರಾಪ್ ಇನ್‌ಶ್ಯೂರೆನ್ಸ್ ಸ್ಕೀಮ್ ನಮ್ಮಲ್ಲಿಲ್ಲ. ಅಲ್ಲಿಗೂ ಏನಾದರೂ ಡಿಸ್ಪೈಸ್ ಸೇಲ್ ಬರುವ ಹಾಗೆ ಇದ್ದರೆ I can go to a Government Depot., put my produce there and take 50% of the market rate and sell whenever I like.. ಆ ಫೆಸಿಲಿಟೀಸ್ ಆ ರಾಷ್ಟ್ರಗಳಲ್ಲಿದೆ. ಇಲ್ಲಿಯವರೆಗೂ ತಾವು ನೋಡಿದ್ದೀರಿ. ಈಗ ತಕ್ಷಣ ಈ ಸಮಸ್ಯೆ ಬಂತಲ್ಲಾ ಒಂದು ಹೇಳಿ ನಾವೇ ಸದನ ಸಮಿತಿಗೆ ಒಪ್ಪಿಕೊಂಡು ಇದೆಲ್ಲಾ ನೋಡಿ ಅದರ ಸ್ಥಿತಿಗತಿಗಳನ್ನೆಲ್ಲಾ ನೋಡಿಕೊಂಡು, ರಾಜ್ಯದಲ್ಲಿರತಕ್ಕ ಬೇರೆ ಬೇರೆ ಜಿಲ್ಲೆಗಳಿಂದ ಬಂದಿರತಕ್ಕ ರಿಪೋರ್ಟ್‌ಗಳನ್ನು ನೋಡಿ, ಇದಕ್ಕೇನೇ ಮಾನ್ಯ ಹಣಕಾಸಿನ ಮಂತ್ರಿಗಳು 15 ಕೋಟಿ ರೂಪಾಯಿ ಜೋಡಿಸುವುದಕ್ಕೆ ಸಾಕಾಯಿತು.15-20 ಕೋಟಿ ರೂಪಾಯಿ ಜೋಡಿಸುವುದಕ್ಕೆನೇ ಬಹಳ ಕಷ್ಟ ಆಗುತ್ತದೆ. ಅದನ್ನು ಒಪ್ಪುವುದಿಲ್ಲ ಎಂದು ಹೇಳವುದಲ್ಲ. ಅವರು ಹೊರಗೆ ಹೋದ ಮೇಲೆ ಅನೌನ್ಸ್ ಮಾಡಬೇಕು ಎಂದು ಅವರೇನು ಹೇಳಿದ್ದಾರೆ, ದೇವರು ಅವರಿಗೆ ಒಳ್ಳೆಯದು ಮಾಡಲಿ ಎಂದು ನಾನು ಅನೌನ್ಸ್ ಮಾಡುತ್ತೇನೆ ಅಷ್ಟೆ.

ಶ್ರೀ ಕೆ.ಎಸ್. ಈಶ್ವರಪ್ಪ (ಶಿವಮೊಗ್ಗ) : ಅವರು ಈ ರೀತಿ ಮಾಡಿದೆ ಹಾಳಾಗಿ ಹೋದರು. ನೀವು ಹಾಗೆ ಆಗಬೇಡಿ ಎಂದು ನಮ್ಮ ಆಸೆ. ನಮ್ಮ ಜವಾಬ್ದಾರಿಯನ್ನು ಅರಿತುಕೊಂಡು ಕೇಂದ್ರ ಸರ್ಕಾರದಿಂದ ಏನು ಮಾಡಬೇಕೋ ಅದನ್ನು ಮಾಡೋಣ. ನಾನು ಹೇಳುತ್ತಿರುವುದು ಬೇರೆ. ಇಡೀ ರಾಜ್ಯದಲ್ಲಿ ಕೆಲವು ಕಡೆ ರೈತರಿಗೆ ಕೊಟ್ಟು, ಕೆಲವು ಕಡೆ ಕೊಡದಿರುವುದು ಸರಿಯಲ್ಲ. ಕೆಲವು ಕೆಲವು ಬೆಳೆಗೆ ಕೊಡುತ್ತೀರಿ, ಇನ್ನು ಕೆಲವು ಕಡೆ, ಕೆಲವು ಬೆಳೆಗೆ ಕೊಡುವುದಿಲ್ಲ ಎಂದು ಹೇಳುವುದು ಸರಿಯಲ್ಲ. ನಮ್ಮ ಒತ್ತಾಯ ಏನೆಂದರೆ ಎಲ್ಲಾ ಬೆಳೆಗಳಿಗೂ ಕೊಡಬೇಕು. ಎಲ್ಲಾ ರೈತರಿಗೂ500 ರೂಪಾಯಿಯಷ್ಟು ಕೊಡಲೇಬೇಕು. ಈ ದಿಕ್ಕಿನಲ್ಲಿ ಮಾಡಬೇಕು. ಕನಿಷ್ಟ 15 ದಿನದಲ್ಲಿ ಆದರೂ ಇದು ಆಗಲೇ ಬೇಕು ಎಂದು ಒತ್ತಾಯ ಮಾಡುತ್ತೇವೆ. ಸರ್ಕಾರದ ಈ ಧೋರಣೆಯನ್ನು ಪ್ರತಿಭಟನೆ ಮಾಡಿ ನಾವು ಸಭಾ ತ್ಯಾಗ ಮಾಡುತ್ತೇವೆ.

(ಬಿಜೆಪಿ ಪಕ್ಷದ ಶಾಸಕರು ಸಭಾತ್ಯಾಗ ಮಾಡಿದರು)

ಶ್ರೀ ಸಿ. ಬೈರೇಗೌಡ : ಕೇಂದ್ರ ಸರ್ಕಾರದಿಂದ ಸಹಾಯ ತರಿಸಿ ಕೊಡಿ.